- - ಸಿ.ಸಿ.

ನಂ.3440/2025

ಪಿ. ಡಬ್ಲ್ಯೂ: 1

( ಇಂದು ದಿಃ 12/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 25 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮ ಬ್ಯಾಂಕು ಕಾನೂನಿನಡಿಯಲ್ಲಿ ನೊಂದಣಿ ಆಗಿದ್ದು ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಆದರೆ ಹಾಜರುಪಡಿಸಬಹುದು. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಮ್ಮ ಸಂಸ್ಥೆ ನಿರ್ದೇಶಕರ ಮಂಡಳಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಪ್ರಕರಣ ನಡೆಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ಪತ್ರವನ್ನು ನೀಡಿದ್ದು ಇರುತ್ತದೆ. ಸದರಿ ಅಧಿಕಾರ ಪತ್ರವನ್ನು / ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಲ್ಲ ಆದರೆ ಹಾಜರುಪಡಿಸಬಹುದು. ಆರೋಪಿ ನಮ್ಮ ಸಂಸ್ಥೆಯಲ್ಲಿ ಸಾಲ ಪಡೆಯುವಾಗ ನಾನು ಪಿರ್ಯಾದಿ ಸಂಸ್ಥೆಯ ಆ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಆರೋಪಿಗೆ ಓವರ್ ಡ್ರಾಪ್ಟ ಸಾಲವನ್ನು ನೀಡಿರುತ್ತೇವೆ. ರೂ. 10,000 ಶೇರಿನ ಮೊತ್ತ ಹಾಗೂ ರೂ. 30,000 ಅನ್ನು ಎಪ್ ಡಿ ಯನ್ನು ನಮ್ಮ ಬಳಿ ಇಟ್ಟುಕೊಳ್ಳಲಾಗಿದೆ. ಆರೋಪಿಗೆ ರೂ. 2,00,000 ಸಾಲವನ್ನು ನೀಡಿರುತ್ತೇವೆ.

ಸಾಲ ನೀಡುವಾಗ ನಾನು ಆ ಶಾಖೆಯಲ್ಲಿ ಇಲ್ಲದೇ ಇದ್ದ ಕಾರಣ ಯಾವ ಯಾವ ದಾಖಲೆಗಳನ್ನು ಪಡೆದಿದ್ದರು ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ಸಾಲ ವಸೂಲಾತಿಗೆ ನಾನು ಹೋಗಿರುತ್ತೇನೆ. ಚೆಕ್ಕನ್ನು ಆರೋಪಿ ನನ್ನ ಬಳಿ ನೀಡಿಲ್ಲಾ ಹಾಗೂ ನನ್ನ ಸಮಕ್ಷಮ ಬರೆದು ನೀಡಿದ್ದು ಇರುವುದಿಲ್ಲಾ. ದಿಃ 26.08.2025 ರಂದು ಆರೋಪಿ ಚೆಕ್ಕು ನೀಡಿದ ಬಗ್ಗೆ ನಮ್ಮ ಆವಕ ಜಾವಕ ರಜಿಸ್ಟರಿನಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಆರೋಪಿ ಯಾವುದೇ ಕಂತನ್ನು ತುಂಬಿರುವುದಿಲ್ಲ. ಸಾಲ ಕಟ್ಟು ಬಾಕಿ ಆದಾಗ ನೊಟೀಸನ್ನು ನೀಡಿದ್ದು ಇರುತ್ತದೆ. ಸದರಿ ನೊಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿ ಈ ಹಿಂದೆ ಪಡೆದ ಸಾಲವನ್ನು ಚುಕ್ತಾ ಮಾಡಿರುವುದಿಲ್ಲ. ಹಿಂದಿನ ಸಾಲ ಕಟ್ಟು ಬಾಕಿ ಆದ ನಂತರ ಚುಕ್ತಾ ಮಾಡಿರುತ್ತಾರೆ. ಹಿಂದಿನ ಸಾಲಕ್ಕೆ ಪಡೆದ ದಾಖಲಾತಿಗಳನ್ನು ಹಿಂದಿನ ಮ್ಯಾನೇಜರ್ ಪಡೆದ ಬಗ್ಗೆ ಹಾಗೂ ವಾಪಸ್ಸು ನೀಡಿರುವ ಬಗ್ಗೆ ನನಗೆ ಮಾಹಿತಿ ಇದೆ. ಚೆಕ್ಕಿನ ಮೇಲೆ ಇರುವ ಬರವಣಿಗೆ ಮತ್ತು ಶಾಹಿಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸರಿಯಲ್ಲ. ಜಾಮೀನುದಾರರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಆರೋಪಿಗೆ ಎಪ್ ಡಿ ಮೊತ್ತ

ಕಟಾವು ಮಾಡಿ ರೂ. 1,60,000 ಸಾಲ ನೀಡಿರುತ್ತೇವೆ. ಎಫ ಡಿ ಮೊತ್ತಕ್ಕೆ ಬಡ್ಡಿ ನೀಡುತ್ತೇವೆ. ಆರೋಪಿ ಪಡೆದ ಸಾಲವನ್ನು ಸಂಪೂರ್ಣ ಚುಕ್ತಾ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಸದರಿ ಶಾಖೆಯಲ್ಲಿ ವ್ಯವಸ್ಥಾಪಕನಾಗಿಲ್ಲದ ಕಾರಣ ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಸದರಿ ಸಾಲದ ಮರುಪಾವತಿಗೆ ನೀಡಿದ್ದು ಇಲ್ಲಾ ಎಂದರೆ ಸರಿಯಲ್ಲ. ಹಿಂದಿನ ಸಾಲದ ದಾಖಲೆಯಾಗಿ ನಿಪಿ 1 ಚೆಕ್ಕನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಲ ಮರುಪಾವತಿ ಆದ ನಂತರ ಆರೋಪಿತನು ಚೆಕ್ಕು ಮತ್ತು ಎಫ ಡಿ ಹಣ ವನ್ನು ಮರಳಿ ನೀಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಆರೋಪಿ ಎಫ ಡಿ ಮೊತ್ತ ಮರಳಿ ನೀಡದೇ ಇದ್ದಾಗ ಜಗಳ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಿಟ್ಟಿನಿಂದ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಶಾಖೆಯ ವ್ಯವಸ್ಥಾಪಕರು ಯಾವುದೇ ವಿಷಯವನ್ನು ನನ್ನ ಗಮನಕ್ಕೆ ತಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 12 ಸದರಿ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಹಣ ನೀಡಲು ಬಾಕಿ ಇಲ್ಲಾ ಎಂದರೆ ಸರಿಯಲ್ಲ. ಆರೋಪಿ ನಮ್ಮ ವಿರುದ್ಧ ದೂರು ನೀಡಿದ ಕಾರಣ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**